ಇಂದು ದಿನಾಂಕ:18.09.2025 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ಮಾಡಿಸಲಾಯಿತು.

**ಪಾಟೀ ಸವಾಲು : 8 ನೇ ಪ್ರತಿವಾದಿ ಪರ ಶ್ರೀ.ಬಿ.ಎನ್. ವಕೀಲರಿಂದಃ**

ನನ್ನ ಹುಟ್ಟೂರು ಮೇಲೂರು. ಆ ಊರಿನಲ್ಲಿ ನಾನು ಮತದಾನ ಮಾಡಿದ್ದೇನೆ. ಮತದಾರರ ಚೀಟಿ ನನ್ನ ಬಳಿ ಇರುವುದಿಲ್ಲ. ಕುಪ್ಪೆ ಚೆನ್ನಬಸವಯ್ಯ ಎಂಬುವರನ್ನು ನಾನು ನೋಡಿಲ್ಲ. ಅವರ ತಂದೆ ಮತ್ತು ತಾಯಿಯ ಹೆಸರು ಗೊತ್ತಿಲ್ಲ. ಕುಪ್ಪೆ ಚೆನ್ನಬಸವಯ್ಯರವರಿಗೆ ಇಬ್ಬರು ಮಕ್ಕಳು ಅವರೆಂದರೆ ದೊಡ್ಡಯ್ಯ ಮತ್ತು ಮುದ್ದಪ್ಪ. ಆ ಬಗ್ಗೆ ದಾಖಲೆಗಳನ್ನು ನ್ಯಾಯಾಲಯಕ್ಕೆ ಕೊಟ್ಟಿದ್ದೀರಾ ಎಂದರೆ ಗೊತ್ತಿಲ್ಲ. ನನಗೆ 16 ವರ್ಷಕ್ಕೆ ಮದುವೆ ಮಾಡಿದ್ದಾರೆ. ಮದುವೆ ಕಾರ್ಡ್ ಮಾಡಿಸಿದ್ದೇವು. ಅದರಲ್ಲಿ ನನ್ನ ತಂದೆ ಮತ್ತು ತಾಯಿಯ ಹೆಸರು ನಮೂದಿಸಲಾಗಿತ್ತು. ನಾನು ಮುದ್ದಪ್ಪನ ಮಗಳು ಎಂದು ತೋರಿಸುವ ದಾಖಲೆಯನ್ನು ಪಡೆದುಕೊಳ್ಳಲು ತಾಲ್ಲೂಕು ಕಚೇರಿಗೆ ಅರ್ಜಿ ಸಲ್ಲಿಸಿದ್ದೆ. ನನ್ನ ವಾದ ಪತ್ರದಲ್ಲಿ ನಾನು ಮುದ್ದಪ್ಪನ ಮಗಳು, ನಾನು ಮುದ್ದಪ್ಪನಿಗೆ ಇಷ್ಟು ಜನ ಮಕ್ಕಳು ಎಂದು ಬರೆಸಿಲ್ಲ. ನಮ್ಮ ತಂದೆಗೆ 5 ಜನ ಮಕ್ಕಳು, ಅವರಲ್ಲಿ 3 ಜನ ತೀರಿಕೊಂಡಿದ್ದಾರೆ. ನಾನು ಮತ್ತು ವಿಜಯಾ ಮಾತ್ರ ಉಳಿದುಕೊಂಡಿದ್ದೇವೆ. ತೀರಿಕೊಂಡವರ ಪೈಕಿ ಇಬ್ಬರು ಗಂಡು ಮಕ್ಕಳು ಒಬ್ಬಳು ಹೆಣ್ಣು ಮಗಳು. ತೀರಿಕೊಂಡಿರುವವರ ಬಗ್ಗೆ ನನ್ನ ವಾದ ಪತ್ರದಲ್ಲಿ ಸೇರಿಸಿಲ್ಲ. ತೀರಿಕೊಂಡವರಿಗೆ ಮದುವೆಯಾಗಿರಲಿಲ್ಲ. ಆ ಮೂರು ಜನರಿಗೂ 10-12 ವರ್ಷ ಇದ್ದಾಗಲೇ ತೀರಿಕೊಂಡಿದ್ದಾರೆ. ದಾವಾ ಆಸ್ತಿಗಳು ಮೂಲತಃ ನನ್ನ ತಾತ ಚೆನ್ನಬಸಪ್ಪನವರಿಗೆ ಸೇರಿತ್ತು. ದಾವಾ ಆಸ್ತಿಗಳು ನನ್ನ ತಾತನಿಗೆ ಸೇರಿತ್ತು ಎಂದು ದಾಖಲೆಗಳನ್ನು ಕೊಟ್ಟಿದ್ದೇನೆ. ಅಂತಹ ದಾಖಲೆಗಳ ಹೆಸರು ಗೊತ್ತಿಲ್ಲ. ಆ ದಾಖಲೆಗಳೆಲ್ಲ ಚೆನ್ನಬಸಪ್ಪನವರ ಹೆಸರಿನಲ್ಲಿದೆ. ಅರ್ಧ ಭಾಗ ಬರಬೇಕೆಂದು ಈ ಕೇಸು ಹಾಕಿದ್ದೇನೆ.

ನನಗೆ ಸರ್ವೆ ನಂಬರ್ ಮತ್ತು ಚೆಕ್ಕುಬಂಧಿ ಗೊತ್ತಿಲ್ಲ. ಕುಪ್ಪೆ ಚೆನ್ನಬಸಪ್ಪ ಮತ್ತು ಮುದ್ದಪ್ಪನವರಿಗೆ ವಾಸದ ಮನೆಗಳು ಇತ್ತು ಎಂದರೆ ಸರಿ ಹಾಗೂ ಒಂದು ಬ್ಯಾರನ್ ಮನೆ ಇದೆ. ಬ್ಯಾರನ್ ಮತ್ತು ವಾಸದ ಮನೆಗಳನ್ನು ಈ ಕೇಸಿನಲ್ಲಿ ಸೇರಿಸಿದ್ದೇನೆ. ಮುದ್ದಪ್ಪ ಮತ್ತು ಚೆನ್ನಬಸಪ್ಪನವರ ಹೆಸರಿನಲ್ಲಿರುವ ದಾಖಲೆಗಳನ್ನು ವಾಸದ ಮನೆ ಮತ್ತು ಬ್ಯಾರನ್ ಮನೆಗಳಿಗೆ ಸಂಬಂಧಿಸಿದಂತೆ ಕೊಟ್ಟಿದ್ದೇನೆ. ನ್ಯಾಯಾಲಯದ ಮುಂದೆ ಇರುವ 8 ನೇ ಪ್ರತಿವಾದಿಯನ್ನು ನೋಡಿದ್ದೀರಾ ಎಂದರೆ ಅವರು ಗಲಾಟೆ ಮಾಡಲು ಬಂದಿದ್ದರು. ಕೇಸು ಹಾಕಿದ ನಂತರ 8 ನೇ ಪ್ರತಿವಾದಿ ಬೋರ್ ವೆಲ್ ತೆಗೆಸಿದ್ದರು ಆಗ ಗಲಾಟೆ ಮಾಡಿದ್ದರು. ದಾವಾ ಐಟಂ ನಂಬರ್ 1 ರ ಆಸ್ತಿಯನ್ನು 8 ನೇ ಪ್ರತಿವಾದಿ ಖರೀದಿಸಿರುವ ಆಸ್ತಿಯಲ್ಲಿ ಅವರು ಬೋರ್ ವೆಲ್ ತೆಗೆಸಿದ್ದಾರೆ ಎಂದರೆ ಸರಿ. 8 ನೇ ಪ್ರತಿವಾದಿ ದಾವಾ ಐಟಂ ನಂಬರ್ 1 ರ ಆಸ್ತಿಯನ್ನು 3 ನೇ ಪ್ರತಿವಾದಿಯಿಂದ ಖರೀದಿಸಿದ್ದಾರೆ ಎಂದರೆ ಸರಿ. 3 ನೇ ಪ್ರತಿವಾದಿಯಿಂದ ಪ್ರತಿವಾದಿ 1 ಮತ್ತು 2 ರವರು ದಾವಾ ಐಟಂ ನಂಬರ್ 1 ರ ಆಸ್ತಿಯನ್ನು ಖರೀದಿಸಿದ್ದಾರೆ. 8 ನೇ ಪ್ರತಿವಾದಿ ಖರೀದಿಸಿದ್ದ ಜಮೀನಿನಲ್ಲಿ ಅವರೇ ವ್ಯವಸಾಯ ಮಾಡಿಕೊಂಡು ಬರುತ್ತಿದ್ದಾರೆ ಎಂದರೆ ಸರಿ. ಅವರಿಗಿಂತ ಮೊದಲು 3 ನೇ ಪ್ರತಿವಾದಿ ಆ ಜಮೀನು ಉಳುವೆ ಮಾಡುತ್ತಿದ್ದರು ಎಂದರೆ ಸರಿ. ಈ ಕೇಸು ಸಲ್ಲಿಸಲು ನಮ್ಮ ವಕೀಲರಿಗೆ ನಾನೇ ಮಾಹಿತಿ ಕೊಟ್ಟಿದ್ದೇನೆ. ಪಂಚಾಯಿತಿ ಸೇರಿಸಿದ್ದ ದಿನಾಂಕ ಗೊತ್ತಿಲ್ಲ. ದಾವಾ ಐಟಂ ನಂಬರ್ 1 ರ ಆಸ್ತಿಯ ಮೇಲೆ ನನಗಾಗಲೀ ನಮ್ಮ ಕುಟುಂಬದವರಿಗಾಗಲೀ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ. ದಾವಾ ಐಟಂ ನಂಬರ್ 1 ರ ಆಸ್ತಿ ನನ್ನ ಪಿತ್ರಾರ್ಜಿತ ಆಸ್ತಿಯಲ್ಲ ಎಂದರೆ ಸರಿಯಲ್ಲ. ನಾನು ಮುದ್ದಪ್ಪನ ಮಗಳಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

***(ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)***

***ಓ.ಹೆ.ಕೆ.ಸರಿ ಇದೆ.***

***ಹಿ.ಸಿ.ನ್ಯಾ ಮತ್ತು ಪ್ರ.ದ.ನ್ಯಾದಂ.***

**ಪಿರಿಯಾಪಟ್ಟಣ**